3) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಡಾ. ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

1) ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಓಪಿಡಿ ಮತ್ತು ಐಪಿಡಿ ಕಟ್ಟಡದ ವೈದ್ಯಕೀಯ ವಿಭಾಗದಲ್ಲಿ ರೋಗಿಗಳನ್ನು ದಾಖಲಿಸಿಕೊಂಡು ಶುಶ್ರೂಷೆ ನೀಡಲಾಗುತ್ತಿದೆ. ಆದರೆ ಸಾಂಪ್ರದಾಯಿಕವಾಗಿ ಉದ್ಘಾಟಿಸಿರುವುದಿಲ್ಲ.

2) ಖಾಲಿ ಇರುವ ವಿವಿಧ ದರ್ಜೆಯ ಹುದ್ದೆಗಳ ಪೈಕಿ:-

1) ಸ್ಥಾನೀಯ ವೈದ್ಯಾಧಿಕಾರಿ ಹುದ್ದೆಯನ್ನು ಬಡ್ತಿ ಮೂಲಕ ತುಂಬುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

2) ಸಹಾಯಕ ಶಸ್ತ್ರ ಚಿಕಿತ್ಸಕರ ಹುದ್ದೆಗಳು ಕರ್ನಾಟಕ ಲೋಕಸೇವಾ ಆಯೋಗದಿಂದ ಸದ್ಯದಲ್ಲಿಯೇ ಭರ್ತಿ ಮಾಡುವ ಕ್ರಮ ಪ್ರಕ್ರಿಯೆಯಲ್ಲಿದೆ.

3) ಶುಶ್ರೂಷಾ ದಾದಿ ಅಧೀಕ್ಷಕರು ದರ್ಜೆ-1 ಮತ್ತು 2, ಪ್ರಾಂಶುಪಾಲರರು, ಹಿರಿಯ ಫಾರ್ಮಸಿಸ್ಟ್, ಶುಶ್ರೂಷಾ ಬೋಧಕರ ಹುದ್ದೆಗಳನ್ನು ಬಡ್ತಿ ಮೂಲಕ ತುಂಬುವ ಕ್ರಮ ಪ್ರಕ್ರಿಯೆಯಲ್ಲಿದೆ.

4) ಡಾಯಟೀಷಿಯನ್ಸ್, ಎಲೆಕ್ಟ್ರೀಷಿಯನ್ಸ್, ಫಿಜಿಯೋಥೆರಪಿಸ್ಟ್, ಕ್ಷ-ಕಿರಣ ತಂತ್ರಜ್ಞರ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ಭರ್ತಿ ಮಾಡಲಾಗುತ್ತಿದೆ.

5) ಶುಶ್ರೂಷಾ ದಾದಿಯರ 100 ಹುದ್ದೆಗಳು ಹೊಸದಾಗಿ ಮಂಜೂರಾಗಿದ್ದು 36 ಹುದ್ದೆಗಳನ್ನು ಈಗಾಗಲೇ ತುಂಬಲಾಗಿದ್ದು ಉಳಿದ ಹುದ್ದೆಗಳನ್ನು ಶೀಘ್ರವೇ ತುಂಬಲಾಗುವುದು.

6) ವಾಹನ ಚಾಲಕರ ಮತ್ತು ಗ್ರೂಪ್-ಡಿ ಹುದ್ದೆಗಳನ್ನು ಭರ್ತಿ ಮಾಡುವ ಕ್ರಮ ಪ್ರಕ್ರಿಯೆಯಲ್ಲಿದೆ.

7) ಹೌದು. ಪ್ರಶ್ನೆ ಸಂ.2ರ ಉತ್ತರದಲ್ಲಿ ವಿವರಿಸಿರುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಪ್ರೌಢ ಶಾಲಾ ಶಿಕ್ಷಕರ ಬೇಡಿಕೆ ಕುರಿತು.

752 - ಶ್ರೀ ಚಂದ್ರಶೇಖರ್ ನಾಯಕ್ (ಗೋಕಾಕ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಾದ್ಯಂತ ಪ್ರೌಢಶಾಲಾ ಶಿಕ್ಷಕರು ನಡೆಸಿದ ಧರಣಿ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅ) *ಪ್ರೌಢಶಾಲಾ ಶಿಕ್ಷಕರ ಬೇಡಿಕೆಗಳ ಬಗ್ಗೆ ಸರ್ಕಾರದವರು ತೆಗೆದುಕೊಂಡ ನಿರ್ಣಯಗಳೇನು?*

ಇ) *ಶಿಕ್ಷಕರ ಬಡ್ತಿ ಮತ್ತು ವೇತನ ತಾರತಮ್ಯ ನೀಗಿಸಲು ಸರ್ಕಾರದವರ ನಿಲುವೇನು?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ಜೂನಿಯರ್ ಟೆಕ್ನಿಕಲ್ ಶಾಲಾ ಶಿಕ್ಷಕರ ವೇತನಕ್ಕೆ ಸಮಾನವಾದ ವೇತನ ಶ್ರೇಣಿಯನ್ನು ನೀಡಬೇಕೆಂಬ ಬೇಡಿಕೆಯ ಬಗ್ಗೆ ಈಗಾಗಲೇ ಪರಿಶೀಲಿಸಿ ತಿರಸ್ಕರಿಸಲಾಗಿದೆ. ಖಾಸಗಿ ಶಾಲಾ ಕಾಲೇಜುಗಳನ್ನು ರಾಷ್ಟ್ರೀಕರಣಗೊಳಿಸಬೇಕೆಂಬ ಬೇಡಿಕೆಯನ್ನು ತಿರಸ್ಕರಿಸಲಾಗಿದೆ. 20 ವರ್ಷ ಸೇವೆ ಸಲ್ಲಿಸಿರುವ ಪ್ರೌಢಶಾಲಾ ಸಹಶಿಕ್ಷಕರಿಗೆ ಗ್ರೇಡ್-1 ವೇತನ ಶ್ರೇಣಿ ನೀಡುವ ಬಗ್ಗೆ ಆದೇಶ ಹೊರಡಿಸಿದೆ. ಸರ್ಕಾರಿ ಸಂಯುಕ್ತ ಪದವಿ ಪೂರ್ವಕಾಲೇಜುಗಳ ವಿದ್ಯಾರ್ಥಿಗಳ ಸಂಖ್ಯೆ 750ಕ್ಕಿಂತ ಹೆಚ್ಚಿರುವ ಪದವಿ ಪೂರ್ವ ಕಾಲೇಜುಗಳಲ್ಲಿ ಉಪ ಪ್ರಾಂಶುಪಾಲರ ಹುದ್ದೆಯನ್ನು ಸೃಜಿಸಿ ಆದೇಶ ಹೊರಡಿಸಲಾಗಿದೆ. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಸಂಸ್ಥೆಯವರು ನಡೆಸುತ್ತಿರುವ ಶಾಶ್ವತ ಅನುದಾನ ರಹಿತ ಶಾಲಾ ಕಾಲೇಜುಗಳಿಗೆ ಅನುದಾನ ನೀಡಬೇಕೆಂಬ ವಿಷಯವು ಸಚಿವ ಸಂಪುಟದ ಪರಿಶೀಲನೆಯಲ್ಲಿದೆ. 1995ರಿಂದ ಈಚೆಗೆ ನಿವೃತ್ತರಾದವರಿಗೆ ಶೇ. 90ರಷ್ಟು ತುಟ್ಟಿಭತ್ಯೆಯನ್ನು ವೇತನದಲ್ಲಿ ವಿಲೀನಗೊಳಿಸುವ ಮತ್ತು 5 ಸ್ಥಗಿತ ವೇತನ ಬಡ್ತಿ ಸೌಲಭ್ಯವನ್ನು ಅನುದಾನಿತ ಶಿಕ್ಷಣ ಸಂಸ್ಥೆಗಳಿಗೂ ವಿಸ್ತರಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) 20 ವರ್ಷ ಸೇವೆ ಸಲ್ಲಿಸಿದ ಎಲ್ಲಾ ಸಹ ಶಿಕ್ಷಕರಿಗೆ ಗ್ರೇಡ್-1 ವೇತನ ಶ್ರೇಣಿ ನೀಡುವ ಬಗ್ಗೆ ಸರ್ಕಾರಿ ಆದೇಶ ಹೊರಡಿಸಲಾಗಿದೆ. ಮುಖ್ಯೋಪಾಧ್ಯಾಯರ ಹುದ್ದೆಯನ್ನು ಬಡ್ತಿಯಿಂದಲೇ ತುಂಬಬೇಕೆಂಬ ಸಂಘದ ಬೇಡಿಕೆಯನ್ನು ಒಪ್ಪಲು ಸಾಧ್ಯವಿಲ್ಲ. 1982ರಿಂದ ಪೂರ್ವಾನ್ವಯ ವಾಗುವಂತೆ ವೇತನ ಪರಿಷ್ಕರಣೆ ಮಾಡಬೇಕೆಂಬ ಸಂಘದ ಬೇಡಿಕೆಯನ್ನು ಒಪ್ಪಲು ಸಾಧ್ಯವಿಲ್ಲ.

ಗುಲ್ಬರ್ಗಾ ಜಿಲ್ಲೆ ಕಮಲಾಪುರ ಕ್ಷೇತ್ರದಲ್ಲಿರುವ ಸ್ಕೂಲುಗಳಿಗೆ ಸ್ವಂತ ಕಟ್ಟಡ ನಿರ್ಮಾಣ

753 - ಶ್ರೀ ರೇವುನಾಯಕ್ ಬೆಳಂಖಿ (ಕಮಲಾಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆ ಕಮಲಾಪುರ ಮೀಸಲಾತಿ ಕ್ಷೇತ್ರದಲ್ಲಿ ಮಟಗಿ ಗ್ರಾಮ ಆಳಂದಾ, ಮುದಡಗಾ ಸ್ವಂತ ನಾಗೂರು, ವಿ.ಕೆ.ಸಲ್ಗದ (ಪ.ಪೂ.ಕಾ) ನಕೋಳ ಈ ಗ್ರಾಮಗಳಲ್ಲಿರುವ ಹೈಸ್ಕೂಲ್‌ಗಳಿಗೆ ಸ್ವಂತ ಕಟ್ಟಡಗಳಿಲ್ಲದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ*

ಆ) *ಹಾಗಿದ್ದಲ್ಲಿ ಕಟ್ಟಡವನ್ನು ನಿರ್ಮಿಸಲು ಯಾವಾಗ ಪ್ರಾರಂಭ ಮಾಡಲಾಗುವುದು?*

ಇ) *ಮುಂದಿನ ಸಾಲಿನಲ್ಲಿ ಇದಕ್ಕಾಗಿ ಮೀಸಲಿಡುವ ಹಣವೆಷ್ಟು?*